ಕಾವೇರಿ. ಧಿಗ್ಗನೆ ಎದ್ದು ಕೂತವನ ಕಣ್ಣ ನಿದ್ದೆ ಹಾರಿ ಹೋಯಿತು. "ಏನು? ಏನಾಯ್ತು?" ತೊದಲಿದ ಮೋಹನ. ನಕ್ಕಳು ಕಾವೇರಿ. ವಿನಾಕಾರಣ ನಗುವುದೂ ಪ್ರಾಯದ ಒಂದು ಲಕ್ಷಣವಾಗಿರಬಹುದು.

"ನಿಮ್ಮ ಬಟ್ಟೆ ಮಳೇಲಿ ನೆನೀತಿದೆ ಕಣ್ರೀ. ಹೇಳೋಣಾಂತ ಬಂದೆ..."

ಅವನು ಮೇಲೆದ್ದು ಸಡಿಲವಾಗಿದ್ದ ಲುಂಗಿಯನ್ನು ಬಿಗಿದು ಕಟ್ಟಿಕೊಂಡು ಅಂಗಳಕ್ಕೆ ಇಳಿಯುವುದರೊಳಗೆ ಕಾವೇರಿ ಮುಂಚೇಕಡೆಯ ಕುರ್ಚಿಯ ಮೇಲೆ ಕೂತು ಶರಪಂಜರವನ್ನು ಕೈಗೆ ಎತ್ತಿಕೊಂಡಾಗಿತ್ತು. ಕಣ್ಣುಗಳು ಅಕ್ಷರದ ಮೇಲೆ ಓಡಾಡುತ್ತಿದ್ದರೂ ಮನದೊಳಗೆ ವಿವರಿಸಲಾಗದ ಸಂಚಲನ. ನಿದ್ದೆಯಲ್ಲಿ ಮೈಮರೆತವನ ಮುಗ್ಧ ಮುಖದಲ್ಲಿ ಕಂಡ ಅದೇನೋ ಸೆಳೆತ ತನ್ನನ್ನು ಪರವಶಳನ್ನಾಗಿಸುತ್ತಿದೆಯೇ? 'ಹುಚ್ಚು ಅಷ್ಟೇ...' ಎಂದುಕೊಳ್ಳುತ್ತಾ ತಲೆ ಕೊಡವಿ ಪುಸ್ತಕದಲ್ಲಿ ಕಣ್ಣು ಕೀಲಿಸಲು ಯತ್ನಿಸಿದಾಗ ಒಳಗಿಂದ ದೊಡ್ಡಮ್ಮನ ಕರೆ ಬಂದಿತ್ತು. "ಬಾರೇ, ಕಾಫಿ ಕುಡಿಯೋಣ..." ಝುಗ್ ಅಂದಿತ್ತು ಎದೆ. ಯಾಕೆ? ಯಾಕೋ? ದೊಡ್ಡಮ್ಮ ತನ್ನನ್ನು ಗಮನಿಸಿದ್ದರೆ ಏನಾಗುತ್ತಿತ್ತು? ಏನೂ ಆಗುತ್ತಿರಲಿಲ್ಲ, ಬಹುಶಃ. ಇರುವ ವಿಷಯ ಹೇಳಿಬಿಟ್ಟಿದ್ದರೆ ಸೈಯಪ್ಪಾ. ಆದರೂ... ಯಾವುದೋ ಮಾಡಬಾರದ ಕೆಲಸ ಮಾಡಿಬಿಟ್ಟಂತೆ ಎದೆಯೊಳಗೆ ಢವಢವ.

★★★

ತನ್ನ ಹಾಗೆ ಮೋಹನನಿಗೂ ಅನಿಸಿತ್ತಾ? ಅವನ ಎದೆಯಲ್ಲೂ ಮೋಹನರಾಗದ ಆಲಾಪ ಶುರುವಾಗಿತ್ತಾ? ಮುಖಾಮುಖಿ ಭೇಟಿಯ ನಂತರ ಅವನು ತನ್ನಲ್ಲಿ ಏನೋ ಆಕರ್ಷಣೆ ಕಂಡುಕೊಂಡಿದ್ದಾನೆ ಎಂದು ಅಂತರಂಗಕ್ಕೆ ವೇದ್ಯವಾಗಿತ್ತು. ಯಾವತ್ತೂ ಬೆಳಗಿನ ಹೊತ್ತಿಗೆ ಅವಳು ಹೂ ಕುಯ್ಯುವಾಗ ಅವನ ತಲೆ ಕಂಡಿರದವಳಿಗೆ ಈಗೀಗ ಅದೇನೋ ಕೆಲಸವಿರುವವನಂತೆ ಕೋಣೆಯ ಒಳಹೊರಗೆ ಓಡಾಡುತ್ತಿದ್ದವನು ಗಮನಕ್ಕೆ ಬರದೆ ಇರಲಿಲ್ಲ. ಆಚೆಯಿಂದ ಅಡುಗೆ ಬೇಯಿಸಿಕೊಳ್ಳಲು ಎರಡು ಕಟ್ಟಿಗೆಸೀಳು ತಂದುಕೊಳ್ಳುವುದೋ, ಬೆಳಿಬೆಳಿಗ್ಗೆ ತಣ್ಣೀರು ಸ್ನಾನ ಮಾಡಿ ಒಗೆದಿರಿಸಿದ ಬಟ್ಟೆಗಳನ್ನು ಹೊರಗೆ ತಂದು ಹರವಿ ಹೋಗುವ ಹೇಳೆಯೋ, ಅಥವಾ ಈ ಮನೆಯವರೇ ಕೊಟ್ಟಿದ್ದ ಹಿತ್ತಾಳೆಯ ಕೊಡದಲ್ಲಿ ಒಗದೆಯ ನೀರು ತಂದುಕೊಳ್ಳುವ ಗಡಿಬಿಡಿಯೋ, ನೇರವಾಗಿ ಅಲ್ಲದಿದ್ದರೂ ಅವಳು ಕದ್ದುಮುಚ್ಚಿ ಅವನನ್ನು ಗಮನಿಸುತ್ತಿದ್ದಳು. ಅವನೂ...

ಹೆಚ್ಚೂಕಮ್ಮಿ ತಿಂಗಳ ನಂತರ ಅಂತಾದ್ದೇ ಮತ್ತೊಂದು ಭಾನುವಾರ. ಅಂತಾದ್ದೇ ಮಧ್ಯಾಹ್ನದ ಹೊತ್ತು. ಅಂತಾದ್ದೇ ಸಂದರ್ಭ. ವ್ಯತ್ಯಾಸವಿಷ್ಟೇ, ಅವಳು ಕತೆಪುಸ್ತಕ ಹಿಡಿದು ಮುಂಚೇಕಡೆಯ ಕುರ್ಚಿಯಲ್ಲಿ ಸ್ಥಾಪನೆಯಾಗದೆ ಹೊರಗಿನ ಮೆಟ್ಟಿಲ ಮೇಲೆ ಕಾಲು ಇಳಿಬಿಟ್ಟುಕೊಂಡು ಕೂತು ಪುಸ್ತಕ ಓದುವ ನಟನೆ ಮಾಡುತ್ತಿದ್ದಳು. ಅವನ ಕೋಣೆಯ ಬಾಗಿಲು ತೆಗೆದುಕೊಂಡಿತ್ತೆನ್ನುವುದು ಅವಳ ರಕ್ತಸಂಚಾರದ ಗತಿಯನ್ನು ತೀವ್ರವಾಗಿಸಿತ್ತು. ಯಾವತ್ತೂ ಇಳಿಮಧ್ಯಾಹ್ನಕ್ಕೆ ಮೊದಲು ತಲೆ ಬಾಚಿಕೊಳ್ಳದಿದ್ದವಳು, ಈ ಕಾರಣದಿಂದ ದೊಡ್ಡಮ್ಮನ ಹತ್ತಿರ ಬೈಸಿಕೊಳ್ಳುತ್ತಿದ್ದವಳು, ಅವತ್ತು ಲಕ್ಷಣವಾಗಿ ತಲೆ ಬಾಚಿ ಜಡೆ ಹೆಣೆದುಕೊಂಡು, ಸಡಿಲ ಜಡೆಯ ಮೇಲೊಂದು ಮಲ್ಲಿಗೆಯ ದಿಂಡು. ಮುಖಕ್ಕೆ ಹೌದೋ, ಅಲ್ಲವೋ ಎನ್ನುವಷ್ಟು ತೆಳುವಾಗಿ ಲೇಪಿಸಿಕೊಂಡ ಪೌಡರಿನ ಘಮ ಮನದೊಳಗೆ ಮಧುರಭಾವವನ್ನು ಉದ್ದೀಪಿಸುತ್ತಾ, ಸೂಕ್ಷ್ಮವಾಗಿ ಗಮನಿಸಿದರಷ್ಟೇ ಗೊತ್ತಾಗುವಂತೆ